ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಸಚಿವರು ಈ ಬಗ್ಗೆ ಎರಡು-ಮೂರು ದಿವಸಗಳಲ್ಲಿ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇವೆ ಎಂದು ಈ ಹಿಂದೆ ಹೇಳಿದ್ದರು. ಅವರು ಮನಸ್ಸು ಮಾಡಿದರೆ ಇದೇನೂ ದೊಡ್ಡ ಕೆಲಸವಲ್ಲ. ದಯವಿಟ್ಟು ಅನುಕೂಲ ಮಾಡಿಕೊಡಿ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಮನಸ್ಸು ಮಾಡುವುದಿಲ್ಲವೆಂದು ತಮಗೇಕೆ ಅನುಮಾನ?

ಶ್ರೀ ಬಿ. ಎಂ. ಇದಿನಬ್ಬ.—ನನ್ನ ಕ್ಷೇತ್ರದ ಪಕ್ಕದಲ್ಲಿ ಇರತಕ್ಕಂಥ ಕಾಸರಗೋಡು ಭಾಗದವರಿಗೆ ಹಿಂದೆ ಈ ಸೌಲಭ್ಯವನ್ನು ಕೊಟ್ಟಿದ್ದಾರೆ, ಈಗಲೂ ವಿಳಂಬ ಮಾಡದೇ ಕೂಡಲೇ ಎಲಿಜಿಬಿಲಿಟಿ ಸರ್ಟಿಫಿಕೇಟ್ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಹೆಚ್ಚೆಂದರೆ ೨೦೦-೨೫೦ ವಿದ್ಯಾರ್ಥಿಗಳಿಗೆ ಈ ಪರವಾನಗಿ ಕೂಡ ಬೇಕಾಗಬಹುದು ಕೊಡುತ್ತೇವೆ ಎಂದು ಹೇಳಿ. ನಿಮ್ಮ ಆಶ್ವಾಸನೆ ಮೂಲಕ ಗಡಿಭಾಗದ ಕನ್ನಡಿಗರಿಗೆ ಸಂತೋಷ ಆಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಸರಕಾರಿ ಆದೇಶವನ್ನು ನೋಡಿಲ್ಲ. ನೋಡಿದ್ದರೆ ಹೇಳಬಹುದಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇಲ್ಲಿ ಪ್ರಶ್ನೆ ಎಂದರೆ ನನಗೆ ಆಶ್ಚರ್ಯವಾಗುತ್ತದೆ. ಸರ್ಕಾರದ ಆಜ್ಞೆಗಳಲ್ಲಿ ಏನಾದರೂ ದೋಷಗಳಿದ್ದರೆ ಅದನ್ನ ಸಾಮಾನ್ಯ ಜನರು ನಮ್ಮ ಗಮನಕ್ಕೆ ತರುತ್ತಾರೆ. ಆಗ ಸರ್ಕಾರದಲ್ಲಿ ಏನು ಲೋಪವಾಗಿದೆ ಎಂದು ಅರಿತುಕೊಂಡು ನಾವು ಸರ್ಕಾರದ ಗಮನಕ್ಕೆ ತಂದು ಇಂಥದ್ದು ತಪ್ಪಾಗಿದೆ ತಿದ್ದುಪಡಿ ಮಾಡಿ ಎಂದು ಹೇಳುತ್ತೇವೆ ಹೊರತು ಇನ್ನೇನೂ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ನಾನಿನ್ನು ಆ ಸರ್ಕಾರದ ಆಜ್ಞೆ ನೋಡಿಲ್ಲ. ಮುಂಜಿಯೇ ಅದನ್ನು ನೋಡಿದ್ದರೆ ಆ ದಿನವೇ ಹೇಳುತ್ತಿದ್ದೆ. ಈಗ ಅದನ್ನು ನೋಡಿ ಜಾಗ್ರತೆ ತೀರ್ಮಾನ ಮಾಡುತ್ತೇವೆಂದು ಆ ದಿನ ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಶಿಕ್ಷಣ ಸಚಿವರ ಮೇಲೆ ನಾನು ಆರೋಪ ಮಾಡುತ್ತಿಲ್ಲ. ಈ ಸದನದಲ್ಲಿ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತಂದಾಗ ಸಂಬಂಧಪಟ್ಟ ಅಧಿಕಾರಿಗಳು ಈ ಆಜ್ಞೆಯನ್ನು ಸರಿಯಾದ ರೀತಿಯಲ್ಲಿ ಮಾಡಬೇಕಾಗಿತ್ತು.

ಶ್ರೀ ಕೆ.ಹೆಚ್. ರಂಗನಾಥ್.—ವಿದ್ಯಾರ್ಥಿಗಳಿಗೆ ತೊಂದರೆ ಕೊಡಬೇಕೆಂಬುದು ಸಚಿವರಿಗಾಗಲೀ ಅಧಿಕಾರಿಗಳಿಗಾಗಲೀ ಇಲ್ಲ · ಬಹಳ ಹಿಂದೆಯೇ ಇದು ಆಗಿದೆ.

ಶ್ರೀ ವಾಟಾಳ್ ನಾಗರಾಜ್.—ಒಂದು ವಾರದಿಂದ ಇದನ್ನು ಹೇಳುತ್ತಿದ್ದೇವೆ ಸ್ವಾಮಿ.

ಶ್ರೀ ಕೆ.ಹೆಚ್. ರಂಗನಾಥ್.—ಅದನ್ನು ಇನ್ನೂ ನೋಡಿಲ್ಲ. ಅದನ್ನು ನೋಡಿದ್ದರೆ ಅದರ ಸಾಧಕ ಬಾಧಕಗಳ ಬಗ್ಗೆ ನೋಡಿ ಏನು ಮಾಡಬೇಕೆಂದು ವಿಚಾರ ಮಾಡುತ್ತಿದ್ದೆ. ಈಗ ನೋಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ನಾಳೆ ನೋಡಿ ಸರ್ಕಾರದ ತೀರ್ಮಾನ ಹೇಳಿ.

(2) Transfusion of blood containing aids virus

SRI S. S. JOSHI.—Hon'ble Speaker, I had raised about the transfusion of blood containing aids Virus to a lady on 5th of July. Hon'ble Minister has written to the counter part of Bombay yesterday only. My request is that any how hon'ble Minister is going to Bombay today, let her take up the matter with the Bombay counter part and please make statement on the floor of the House.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಸಚಿವರು ಬರೀ ತಲೆ ಆಡಿಸಿದರೆ ಆಗುವುದಿಲ್ಲ. ಬಾಯಲ್ಲಿ ಉತ್ತರ ಹೇಳಬೇಕು. ಹೌದು ಮಾಡುತ್ತೇವೆ ಎಂದು ಹೇಳಬೇಕು.

MR. SPEAKER.—I uphold the objection taken by the leader of the Opposition that the sign language do not form part of the proceedings.

ಶ್ರೀಮತಿ ಪುನೊ ರಮಾ ಮದ್ಧ್ವರಾಜ್.—ನಾನು ಬೊಂಬಾಯಿಗೆ ಹೋದಾಗ ಈ ಬಗ್ಗೆ ಅಲ್ಲಿನ ಆರೋಗ್ಯ ಸಚಿವರ ಹತ್ತಿರ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಹರ್ಷ ಕುಮಾರಗೌಡ.—ಮೈಸೂರು ಕೆ.ಆರ್. ಆಸ್ಪತ್ರೆಯಲ್ಲಿ ಅಂಬ್ಯುಲೆನ್ಸೇ ಇಲ್ಲ.

ಅಧ್ಯಕ್ಷರು.—ಬಹಳ ಕಡೆ ಅದು ಇಲ್ಲ.

ಶ್ರೀ ಪಾಟೀಳ್ ನಾಗರಾಜ್.—ಕೆ.ಆರ್. ಆಸ್ಪತ್ರೆ ಎನ್ನುವುದು ಬಂದು ನರಕ. ಅದಕ್ಕೆ ಬಹಳ ಕಾಯಕಲ್ಪ ಮಾಡಬೇಕು. ಮಾನ್ಯ ಸಚಿವರೇ ಅಲ್ಲಿಗೆ ಹೋಗಿ ಮೂಗು ಮುಚ್ಚಿಕೊಂಡು ಬಂದಿರುವುದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು.—ತಾವು ನೋಟೀಸ್ ಕೊಡಿ.

ಶ್ರೀ ಹರ್ಷ ಕುಮಾರಗೌಡ.—ಒಂದು ವಿಚಾರ ಹೇಳುತ್ತೇನೆ. ಹೋದವಾರ ಮೈಸೂರಿನಲ್ಲಿ ಒಂದು ಅಪಘಾತವಾಯಿತು. ಆ ಯುವಕನನ್ನು ಆಸ್ಪತ್ರೆಗೆ ಒಯ್ಯುವುದರೊಳಗಾಗಿ ಆತ ಸತ್ತು ಹೋದ. ಅಲ್ಲಿ ಡಯಾಲಿಸಿಸ್ ಯೂನಿಟ್ ಇದ್ದರೂ ಅದು ಕೆಲಸ ಮಾಡುತ್ತಿಲ್ಲ. ಎಕ್ಸ್‌ರೇ ಯೂನಿಟ್ಸ್ ನಾಲ್ಕು ಇದ್ದರೂ ಒಂದೇ ವರ್ಕ್ ಆಗುತ್ತಿರುವುದು. ಇಂತಹ ಅವ್ಯವಸ್ಥೆಗೆ ಕಾರಣವೇನೆಂದು ಮಾನ್ಯ

11-30 A.M.

ಸಚಿವರು ಉತ್ತರ ಕೊಡಬೇಕು. ಮತ್ತೆ ಈ ರೀತಿಯ ಅವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್.—ಅಲ್ಲಿ ಎಕ್ಸ್‌ರೇ ಫಿಲಂಗಳು ಇಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು.—ತಾವು ನೋಟೀಸ್ ಕೊಡಿ.

ಗಮನ ಸೆಳೆಯುವ ಸೂಚನೆಗಳು

ಮಂಚನಬೆಲೆ ಯೋಜನೆಯಲ್ಲಿ ಮುಳುಗಡೆಯಾದ ಜಮೀನಿನ ರೈತರಿಗೆ ಪರಿಹಾರ ಧನ ಹಾಗೂ ಪುನರ್‌ವಸತಿ ಸೌಲಭ್ಯ

ಶ್ರೀ ಎಚ್.ಎಂ. ರೇವಣ್ಣ. ಮಾನ್ಯ ಅಧ್ಯಕ್ಷರೇ, ನಾಗಡಿ ತಾಲ್ಲೂಕಿನ ಮಂಚನಬೆಲೆ ಯೋಜನೆಯಲ್ಲಿ ಮುಳುಗಡೆಯಾದ ಜಮೀನಿನ ರೈತರಿಗೆ ಇದುವರೆವಿಗೂ ಪರಿಹಾರ ಧನ ಹಾಗೂ ಪುನರ್ ವಸತಿ ಸೌಲಭ್ಯಗಳನ್ನು ಕಲ್ಪಿಸದಿರುವುದರಿಂದ ಅಲ್ಲಿನ ರೈತಾಪಿ ಜನರಿಗೆ ಉಂಟಾಗುತ್ತಿರುವ ತೊಂದರೆ ಬಗ್ಗೆ ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಮಾನ್ಯ ಲೋಕೋಪಯೋಗಿ ಮಂತ್ರಿಗಳು). ಮಾನ್ಯ ಅಧ್ಯಕ್ಷರೇ,

ಮಂಚನಬೆಲೆ ಯೋಜನೆ ಆಣೆಕಟ್ಟೆಯಿಂದ ಸುಮಾರು ೩೬೫ ಹೆಕ್ಟೇರ್ ಭೂಮಿ ಮತ್ತು ಅವೇರಾಹಳ್ಳಿ ವಾಡಹಳ್ಳಿ ಮತ್ತು ವೀರಾಪುರ ಎಂಬ ಮೂರು ಗ್ರಾಮಗಳು ಮುಳುಗಡೆಯಾಗಿರುತ್ತದೆ. ಈ ೩೬೫ ಹೆಕ್ಟೇರ್ ಭೂಮಿಯಲ್ಲಿ ೧೧೭ ಹೆಕ್ಟೇರ್ ಕಾಡಿನ ಪ್ರದೇಶವಾಗಿದ್ದು ಉಳಿದ ೨೪೮ ಹೆಕ್ಟೇರ್ ಭೂ ಪ್ರದೇಶವು ತೋಟ ಮತ್ತು ಒಣ ಭೂಮಿಯಾಗಿರುತ್ತದೆ. ಮುಳುಗಡೆಯಾದ ಅವೇರಾಹಳ್ಳಿ ಮತ್ತು ವೀರಾಪುರ ಗ್ರಾಮಸ್ಥರನ್ನು ಅವೇರಾಹಳ್ಳಿಯ ಪಶ್ಚಿಮ ಪ್ರದೇಶವಾದ ಕೋಲೂರು, ಪರ್ತೂರು ಮತ್ತು ಕಡಬಗೆರೆ ಗ್ರಾಮಗಳಿಗೆ ಸ್ಥಳಾಂತರಿಸಲಾಗಿದೆ. ಇವರುಗಳಿಗೆ ಮನೆ ನಿವೇಶನ, ಪ್ರತಿಯೊಂದು